# ಕರ್ನಾಟಕ ಸರ್ಕಾರ

ಸಂ: ಕೃಇ 01 ಕೃಕೈಲು 2019 (ಭಾ-3)

ಕರ್ನಾಟಕ ಸರ್ಕಾರದ ಸಚಿವಾಲಯ
ಬಹುಮಹಡಿಗಳ ಕಟ್ಟಡ,
ಬೆಂಗಳೂರು, ದಿನಾಂಕ: 04.07.2019.

## ಟಿಪ್ಪಣಿ

ವಿಷಯ:- ದಿನಾಂಕ: 18.06.2019ರಂದು ನಡೆದ ಇಸ್ರೇಲ್ ತಂತ್ರಜ್ಞಾನ ಬೇಸಾಯ ಪದ್ಧತಿಯನ್ನು ರಾಜ್ಯದಲ್ಲಿ ಅನುಷ್ಠಾನಗೊಳಿಸುವಲ್ಲಿ ಕೃಷಿ ಮತ್ತು ತೋಟಗಾರಿಕೆ ವಿಶ್ವವಿದ್ಯಾಲಯಗಳ ಪರಿಣಾಮಕಾರಿ ಪಾತ್ರಗಳ ಕುರಿತು ನಡೆದ ಸಭೆಯ ನಡವಳಿ

*******

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಇಸ್ರೇಲ್ ತಂತ್ರಜ್ಞಾನ ಬೇಸಾಯ ಪದ್ಧತಿಯನ್ನು ರಾಜ್ಯದಲ್ಲಿ ಅನುಷ್ಠಾನಗೊಳಿಸುವಲ್ಲಿ ಕೃಷಿ ಮತ್ತು ತೋಟಗಾರಿಕೆ ವಿಶ್ವವಿದ್ಯಾಲಯಗಳ ಪರಿಣಾಮಕಾರಿ ಪಾತ್ರಗಳ ಕುರಿತು, ದಿನಾಂಕ: 18.06.2019ರಂದು ಕಾರ್ಯದರ್ಶಿಗಳು, ಕೃಷಿ ಇಲಾಖೆ ಇವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯ ನಡವಳಿಯ ಪ್ರತಿಯನ್ನು ಮುಂದಿನ ಅಗತ್ಯ ಕ್ರಮಕ್ಕಾಗಿ ಇದರೊಂದಿಗೆ ಲಗತ್ತಿಸಿ ಕಳುಹಿಸಿಕೊಡಲು ನಿರ್ದೇಶಿಸಲ್ಪಟ್ಟಿದ್ದೇನೆ.

ತಮ್ಮ ನಂಬುಗೆಯ,

B S Nagarathnam

(ಬಿ.ಎಸ್. ನಾಗರತ್ನಮ್ಮ)
ಸರ್ಕಾರದ ಅಧೀನ ಕಾರ್ಯದರ್ಶಿ
ಕೃಷಿ ಇಲಾಖೆ (ಯೋಜನೆ)

04/07/19

**ಇವರಿಗೆ:**

1. ಡಾ. ರಾಜೇಂದ್ರ ಪ್ರಸಾದ್, ಕುಲಪತಿಗಳು, ಕೃಷಿ ವಿಶ್ವವಿದ್ಯಾಲಯ, ಬೆಂಗಳೂರು.
2. ಡಾ: ಎಂ.ವಿ.ವೆಂಕಟೇಶ್, ನಿರ್ದೇಶಕರು, ತೋಟಗಾರಿಕೆ ಇಲಾಖೆ, ಲಾಲ್‌ಬಾಗ್ ಬೆಂಗಳೂರು.
3. ಶ್ರೀಮತಿ ನಂದಿನಿ ಕುಮಾರಿ, ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ಅಂತರಗಂಗಾ ಸೂಕ್ಷ್ಮ ನೀರಾವರಿ ನಿಗಮ ನಿಯಮಿತ, ಬೆಂಗಳೂರು.
4. ಡಾ. ಹನುಮಂತಪ್ಪ ಡಿ.ಸಿ., ಹಿರಿಯ ವಿಜ್ಞಾನಿ(ಬೇಸಾಯಶಾಸ್ತ್ರ), ಕೃಷಿ ವಿಶ್ವವಿದ್ಯಾಲಯ, ಬೆಂಗಳೂರು.
5. ಡಾ. ಮೂಡಲಗಿರಿಯಪ್ಪ, ಮುಖ್ಯ ವಿಜ್ಞಾನಿ, ಖುಷ್ಕಿ ಸಂಶೋಧನಾ ಬೇಸಾಯ ಪ್ರಾಯೋಜನೆ, ಜಿ.ಕೆ.ವಿ.ಕೆ., ಬೆಂಗಳೂರು.
6. ಡಾ. ತಿಮ್ಮೇಗೌಡ ಎಂ.ಎನ್., ಹಿರಿಯ ವಿಜ್ಞಾನಿ, ಜಿ.ಕೆ.ವಿ.ಕೆ., ಕೃಷಿ ವಿಶ್ವವಿದ್ಯಾಲಯ, ಬೆಂಗಳೂರು.
7. ಶ್ರೀ ರಮೇಶ ತುರಮರಿ, ತೋ.ತ.ಸ., ಶಿರಸಿ.
8. ಶ್ರೀ ಕೆ.ಬಿ.ದುಂಡಿ, ತೋಟಗಾರಿಕೆ ಅಪರ ನಿರ್ದೇಶಕರು, ಲಾಲ್‌ಬಾಗ್, ಬೆಂಗಳೂರು.
9. ಶ್ರೀ ಲಕ್ಷ್ಮಣ್ ಎಸ್.ಕೆ., ಜಂಟಿ ಕೃಷಿ ನಿರ್ದೇಶಕರು, ಚಿತ್ರದುರ್ಗ ಜಿಲ್ಲೆ, ಚಿತ್ರದುರ್ಗ.
10. ಶ್ರೀ ಸಿ.ಬಿ.ಬಾಲರೆಡ್ಡಿ, ಜಂಟಿ ಕೃಷಿ ನಿರ್ದೇಶಕರು, ಗದಗ.
11. ಡಾ. ಹೆಚ್.ಕೆ. ಶಿವಕುಮಾರ್, ಜಂಟಿ ಕೃಷಿ ನಿರ್ದೇಶಕರು, ಕೋಲಾರ.
12. ಶ್ರೀಮತಿ ಶಭನಾ ಎಂ. ಶಕೀಲ್, ಜಂಟಿ ನಿರ್ದೇಶಕರು, ಕೃಷಿ ಇಲಾಖೆ, ಕೊಪ್ಪಳ.
13. ಶ್ರೀ ರಘು ಬಿ., ತೋಟಗಾರಿಕೆ ಉಪ ನಿರ್ದೇಶಕರು, ತುಮಕೂರು ಜಿಲ್ಲೆ, ತುಮಕೂರು.

14. ಶ್ರೀ ಎಸ್.ಪಿ.ಭೋಗಿ, ತೋಟಗಾರಿಕೆ ಉಪ ನಿರ್ದೇಶಕರು, ಹಾವೇರಿ ಜಿಲ್ಲೆ, ಹಾವೇರಿ.
15. ಡಾ. ಎನ್.ಬಸವರಾಜ್, ಸಂಶೋಧನಾ ನಿರ್ದೇಶಕರು, ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ಬಾಗಲಕೋಟೆ.
16. ಸಂಶೋಧನಾ ನಿರ್ದೇಶಕರು, ಕೃಷಿ ವಿಶ್ವವಿದ್ಯಾಲಯ, ಬೆಂಗಳೂರು.
17. ಸಹ ಸಂಶೋಧನಾ ನಿರ್ದೇಶಕರು, ವಿ.ಸಿ.ಫಾರಂ, ಮಂಡ್ಯ.
18. ಡಾ. ಸಿ.ರಾಮಚಂದ್ರ, ಪ್ರಾಧ್ಯಾಪಕರು(ಬೇಸಾಯಶಾಸ್ತ್ರ), ವಿ.ಸಿ. ಫಾರಂ, ಮಂಡ್ಯ.
19. ಡಾ. ಎಂ.ವಿ.ಮಂಜುನಾಥ್, ಪ್ರಾಧ್ಯಾಪಕರು(ಕೃಷಿ ತಾಂತ್ರಿಕ), ಕೃಷಿ ವಿಶ್ವವಿದ್ಯಾಲಯ, ಧಾರವಾಡ.
20. ಶ್ರೀ ಕೆ.ಸಿ.ಶಶಿಧರ, ಪ್ರಾಧ್ಯಾಪಕರು ಮತ್ತು ಮುಖ್ಯಸ್ಥರು, ಕೃಷಿ ಇಂಜಿನಿಯರಿಂಗ್, ಕೃಷಿ ತೋಟಗಾರಿಕೆ ವಿಶ್ವವಿದ್ಯಾಲಯ, ಶಿವಮೊಗ್ಗ.
21. ಡಾ. ಆಯ್.ಬಿ.ಬಿರಾದರ, ಪ್ರಾಧ್ಯಾಪಕರು(ಬೇಸಾಯಶಾಸ್ತ್ರ), ಕುಲಪತಿಗಳ ಕಾರ್ಯಾಲಯ, ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ಬಾಗಲಕೋಟೆ.
22. ಶ್ರೀ. ಕೆ.ಟಿ. ರಾಜಣ್ಣ, ವಿಷಯ ತಜ್ಞರು, ತೋಟಗಾರಿಕೆ, ಸುಜಲ–III, ಲಾಲ್‌ಬಾಗ್
23. ಶ್ರೀ ಜಿ.ಎನ್.ವೆಂಕಟರಾಮರಾವ್, ಸಮಾಲೋಚಕರು, ತೋಟಗಾರಿಕೆ ಇಲಾಖೆ.
24. ಶ್ರೀ ಇಂ. ರಾಜಕುಮಾರ್ ಹಳಿ ದೊಡ್ಡಿ, ಸಹಾಯಕ ಪ್ರಾಧ್ಯಾಪಕರು, ಸಂಶೋಧನಾ ನಿರ್ದೇಶನಾಲಯ, ಕೃಷಿ ವಿಶ್ವವಿದ್ಯಾಲಯ, ರಾಯಚೂರು.
25. ಶ್ರೀ ಅಶೋಕ್ ಆರ್.ಕೆ., ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು, ಹಾವೇರಿ.
26. ಶ್ರೀ ಬಸವರಾಜ್ ಎನ್. ಬರಿಗಾರ್, ಹಿರಿಯ ಸಹಾಯಕರು, ತೋಟಗಾರಿಕೆ ನಿರ್ದೇಶನಾಲಯ, ಹಾವೇರಿ.
27. ಶ್ರೀ ದತ್ತಾತ್ರೇಯ ಪಾಟೀಲ್, ಎನ್.ಹೆಚ್.ಎಂ., ಯಾದಗಿರಿ.

**<u>ಪ್ರತಿ ಮಾಹಿತಿಗಾಗಿ:</u>**

1. ಸರ್ಕಾರದ ಕಾರ್ಯದರ್ಶಿ, ಕೃಷಿ ಇಲಾಖೆ ಇವರ ಆಪ್ತ ಕಾರ್ಯದರ್ಶಿ.
2. ಸರ್ಕಾರದ ಕಾರ್ಯದರ್ಶಿ, ತೋಟಗಾರಿಕೆ ಇಲಾಖೆ ಇವರ ಆಪ್ತ ಕಾರ್ಯದರ್ಶಿ.
3. ಮಿಷನ್ ನಿರ್ದೇಶಕರು ಹಾಗೂ ಸರ್ಕಾರದ ವಿಶೇಷ ಕಾರ್ಯದರ್ಶಿ (ಆಹಾರ ಸಂಸ್ಕರಣೆ ಮತ್ತು ಬೆಳೆ ಕಟಾವು ತಂತ್ರಜ್ಞಾನ) ಕೃಷಿ ಇಲಾಖೆ ಇವರ ಆಪ್ತ ಸಹಾಯಕರು.
4. ಸರ್ಕಾರದ ಉಪಕಾರ್ಯದರ್ಶಿ–1, ಕೃಷಿ ಇಲಾಖೆ ಇವರ ಆಪ್ತ ಸಹಾಯಕರು.
5. ಸರ್ಕಾರದ ಉಪಕಾರ್ಯದರ್ಶಿ, ತೋಟಗಾರಿಕೆ ಇಲಾಖೆ ಇವರ ಆಪ್ತ ಸಹಾಯಕರು.

78

**ರಾಜ್ಯದಲ್ಲಿ ಇಸ್ರೇಲ್ ತಂತ್ರಜ್ಞಾನ ಆಧಾರಿತ ಬೇಸಾಯ ಪದ್ಧತಿಯನ್ನು ರಾಜ್ಯದಲ್ಲಿ ಅನುಷ್ಠಾನಗೊಳಿಸುವಲ್ಲಿ ಕೃಷಿ ಮತ್ತು ತೋಟಗಾರಿಕೆ ವಿಶ್ವವಿದ್ಯಾಲಯಗಳ ಪರಿಣಾಮಕಾರಿ ಪಾತ್ರಗಳ ಕುರಿತಂತೆ ದಿನಾಂಕ:18-06-2019ರಂದು ನಡೆದ ಪರಿಶೀಲನಾ ಸಭೆಯ ನಡವಳಿಕೆಗಳು:**

ಕರ್ನಾಟಕ ಅಂತರಗಂಗಾ ಸೂಕ್ಷ್ಮ ನೀರಾವರಿ ನಿಗಮ ನಿಯಮಿತಯ ವ್ಯವಸ್ಥಾಪಕ ನಿರ್ದೇಶಕರು, ಸಭೆಗೆ ಹಾಜರಿದ್ದ ಸರ್ಕಾರದ ಕಾರ್ಯದರ್ಶಿ, ಕೃಷಿ ಇಲಾಖೆ ಮತ್ತು ಮಿಷನ್ ನಿರ್ದೇಶಕರು ಹಾಗೂ ಎಲ್ಲಾ ಅಧಿಕಾರಿಗಳನ್ನು ಸ್ವಾಗತಿಸಿದರು. ಸರ್ಕಾರದ ಕಾರ್ಯದರ್ಶಿ, ಕೃಷಿ ಇಲಾಖೆ ಇವರು ಸಭೆಯ ಅಧ್ಯಕ್ಷತೆ ವಹಿಸಿದ್ದರು.

ಸಭೆಗೆ ಹಾಜರಾಗುವಂತೆ ಎಲ್ಲಾ ವಿಶ್ವವಿದ್ಯಾಲಯಗಳ ಕುಲಪತಿಗಳಿಗೆ ಸೂಚಿಸಿದ್ದರೂ ಸಹ ಧಾರವಾಡ, ರಾಯಚೂರು ಮತ್ತು ಶಿವಮೊಗ್ಗ ವಿಶ್ವವಿದ್ಯಾಲಯಗಳ ಕುಲಪತಿಗಳು ಹಾಜರಾಗದಿರುವ ಬಗ್ಗೆ ಸರ್ಕಾರದ ಕಾರ್ಯದರ್ಶಿಗಳು ತೀವ್ರ ವಿಷಾದ ವ್ಯಕ್ತಪಡಿಸಿ, ಇನ್ನು ಮುಂದೆ ಈ ರೀತಿಯ ನಡೆ ಸೂಕ್ತವಲ್ಲವೆಂದು ಸೂಚನೆಗಳನ್ನು ನೀಡಿದರು. ಇಸ್ರೇಲ್ ತಂತ್ರಜ್ಞಾನ ಆಧಾರಿತ ಕೃಷಿ ಪದ್ದತಿ ಯೋಜನೆಯನ್ನು ನಮ್ಮ ನಾಡಿನ ರೈತಬಾಂಧವರಿಗೆ ಕಲ್ಪಿಸುವುದು ಘನ ಸರ್ಕಾರದ ಮಹತ್ವಕಾಂಕ್ಷೆಯ ಯೋಜನೆಯಾಗಿದೆ. ಈ ಯೋಜನೆಯನ್ನು ಅನುಷ್ಠಾನಗೊಳಿಸುವಲ್ಲಿ ಕೃಷಿ ಮತ್ತು ತೋಟಗಾರಿಕೆ ವಿಶ್ವವಿದ್ಯಾನಿಲಯಗಳ ಕುಲಪತಿಗಳು ಮತ್ತು ಸಂಬಂಧಿಸಿದ ಅಧಿಕಾರಿಗಳ ಪಾತ್ರ ಮಹತ್ವದ್ದು ಎಂದು ಕೃಷಿ ಇಲಾಖೆಯ ಸರ್ಕಾರದ ಕಾರ್ಯದರ್ಶಿ ಅವರು ತಿಳಿಸಿದರು.

ಸನ್ಮಾನ್ಯ ಮುಖ್ಯಮಂತ್ರಿಗಳು 2018-19ನೇ ಸಾಲಿನ ಆಯವ್ಯಯ ಭಾಷಣದಲ್ಲಿ ರಾಜ್ಯದಲ್ಲಿ ಇಸ್ರೇಲ್ ಮಾದರಿ ಕೃಷಿ ಪದ್ಧತಿಯನ್ನು ಅಳವಡಿಸಿಕೊಳ್ಳಲು ಯೋಜನೆಯನ್ನು ಘೋಷಿಸಿರುತ್ತಾರೆ. ಸದರಿ ಆಯವ್ಯಯ ಘೋಷಣೆಯನ್ನ್ನು ಅನುಷ್ಠಾನಗೊಳಿಸಲು ಸಮಿತಿಯೊಂದನ್ನು ರಚಿಸಲಾಗಿದ್ದು, ಸದರಿ ಸಮಿತಿಯು ಇಸ್ರೇಲ್ ಮಾದರಿ ಕೃಷಿ ಪದ್ಧತಿಯನ್ನು ರಾಜ್ಯದಲ್ಲಿ ಅಳವಡಿಸಿಕೊಳ್ಳುವ ಬಗ್ಗೆ ಸಮಗ್ರ ಶಿಫಾರಸ್ಸುಗಳೊಂದಿಗೆ ವರದಿಯನ್ನು ಸಲ್ಲಿಸಿರುತ್ತದೆ. ಸದರಿ ವರದಿಯಲ್ಲಿ ಶಿಫಾರಸ್ಸುಗಳನ್ವಯ ಸಂಬಂಧಪಟ್ಟ ಇಲಾಖೆಗಳ ಅಭಿಪ್ರಾಯದೊಂದಿಗೆ ಸಚಿವ ಸಂಪುಟದ ಅನುಮೋದನೆ ಪಡೆದು, ರಚಿಸಲಾಗಿರುವ ಮಿಷನ್ ನಿರ್ದೇಶನಾಲಯವು ಕೃಷಿ ಇಲಾಖೆಯಡಿ ಕಾರ್ಯನಿರ್ವಹಿಸುತ್ತದೆ ಎಂದು ಕಾರ್ಯದರ್ಶಿ ಅವರು ಹೇಳಿದರು.

ರಾಜ್ಯದಲ್ಲಿ ಕಳೆದ 11 ವರ್ಷಗಳಿಂದ ಅನಾವೃಷ್ಠಿಯಿಂದ ಅತಿ ಹೆಚ್ಚು ಜಿಲ್ಲೆಗಳು ಬರಪೀಡಿತವಾಗಿದ್ದು, ರೈತಬಾಂಧವರು ಕೃಷಿ ವಲಯದಲ್ಲಿ ಸಂಕಷ್ಟಗಳನ್ನು ಎದುರಿಸುತ್ತಿದ್ದಾರೆ. ಈ ಸಮಸ್ಯೆಗಳನ್ನು ದೂರಮಾಡಲು ರಾಜ್ಯದಲ್ಲಿ ಇಸ್ರೇಲ್ ಮಾದರಿ ಕೃಷಿ ಪದ್ಧತಿ ಜಾರಿಗೆ ತರುವ ಮೂಲಕ ರೈತರಿಗೆ ವೈಜ್ಞಾನಿಕ ಅನುಕೂಲಗಳನ್ನು ಕಲ್ಪಿಸಿ ಕೃಷಿ ಕ್ಷೇತ್ರದಲ್ಲಿ ಸುಧಾರಣೆ ಮಾಡುವುದು ಈ ಯೋಜನೆಯ ಪ್ರಮುಖವಾದ ಉದ್ದೇಶ ಮತ್ತು ಇಸ್ರೇಲ್ ಮಾದರಿ ಕೃಷಿ ಪದ್ಧತಿಯಿಂದ ರೈತರ ಆರ್ಥಿಕ ಪರಿಸ್ಥಿತಿಯು ಸುಧಾರಿಸಿ, ಕಡಿಮೆ ಬಂಡವಾಳದಲ್ಲಿ ಹೆಚ್ಚು ಇಳುವರಿ ಪಡೆಯುವಂತೆಯಾಗಬೇಕು ಎಂದು ಸರ್ಕಾರದ ಕಾರ್ಯದರ್ಶಿಯವರು ತಿಳಿಸಿದರು.

ಮಿಷನ್ ನಿರ್ದೇಶಕರು ಸಭೆಯನ್ನು ಉದ್ದೇಶಿಸಿ ಮಾತನಾಡುವ ವೇಳೆ ಪ್ರಸ್ತುತ ಮಿಷನ್ ನಿರ್ದೇಶನಾಲಯವು, ಇಸ್ರೇಲ್ ತಂತ್ರಜ್ಞಾನ ಆಧಾರಿತ ಕೃಷಿ ಯೋಜನೆಯ ಅಳವಡಿಕೆಯಲ್ಲಿ, ಪಾಲುದಾರರಿಗೆ ಯೋಜನೆಯ ಬಗ್ಗೆ ಸೂಕ್ತ ಅರಿವು ಮೂಡಿಸುವುದು ಹಾಗೂ ಅವರಲ್ಲಿ ಅಗತ್ಯ ಕೌಶಲ್ಯಗಳನ್ನು ಅಭಿವೃದ್ಧಿಪಡಿಸುವುದು ಪ್ರಮುಖ ಅಂಶವಾಗಿರುತ್ತದೆಂದು ಮಿಷನ್ ನಿರ್ದೇಶಕರು

ಹೇಳಿದರು. ಈ ಪ್ರಯತ್ನದಲ್ಲಿ, ತಂತ್ರಜ್ಞಾನ ಅಳವಡಿಕೆ, ಸಾಮರ್ಥ್ಯಾಭಿವೃದ್ಧಿ ಹಾಗೂ ನೂತನ ಕೃಷಿ ಪದ್ಧತಿಗಳನ್ನು ಅಳವಡಿಸಿಕೊಳ್ಳಲು ಪ್ರೋತ್ಸಾಹ ನೀಡುವುದಕ್ಕೆ ಪ್ರಾಮುಖ್ಯತೆ ನೀಡಲಾಗುತ್ತದೆ. ಕೃಷಿ ಸಮುದಾಯಕ್ಕೆ ಹಲವಾರು ನೂತನ ಪದ್ಧತಿಗಳ ಬಗ್ಗೆ ಜ್ಞಾನ ವರ್ಗಾವಣೆ ಮಾಡುವುದು ಸಹ ಈ ಯೋಜನೆಯ ಮಹತ್ವದ ಅಂಶವಾಗಿರುತ್ತದೆ. ರೈತರಿಗೆ ಅಗತ್ಯ ಜ್ಞಾನ ವರ್ಗಾವಣೆ ಮಾಡಿ ಅಪೇಕ್ಷಿತ ಬದಲಾವಣೆ ತರುವ ಈ ಕಾರ್ಯದಲ್ಲಿ ವಿಶ್ವವಿದ್ಯಾಲಯಗಳು ಅವುಗಳ ಸಂಶೋಧನೆ ಹಾಗೂ ಪ್ರಚಾರ ಚಟುವಟಿಕೆಗಳ ಸಂಬಂಧ ಪ್ರಮುಖ ಪಾತ್ರ ವಹಿಸಬೇಕಾಗುತ್ತದೆ ಎಂದು ಅವರು ತಿಳಿಸಿದರು.

ಸದರಿ ಯೋಜನೆಯನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು ರಾಜ್ಯದಲ್ಲಿನ ಕೃಷಿ ಮತ್ತು ತೋಟಗಾರಿಕೆ ವಿಶ್ವವಿದ್ಯಾಲಯಗಳ ಪಾತ್ರವು ಪ್ರಮುಖವಾಗಿರುತ್ತದೆಂದು ಮಿಷನ್ ನಿರ್ದೇಶಕರು ಸಭೆಯಲ್ಲಿ ತಿಳಿಸಿದರು.

ಇಸ್ರೇಲ್ ಮಾದರಿ ಕೃಷಿ ಪದ್ಧತಿಯನ್ನು ರಾಜ್ಯದಲ್ಲಿ ಅಳವಡಿಸಿಕೊಳ್ಳುವ ಬಗ್ಗೆ ದಿನಾಂಕ: 13-02-2019ರಂದು ಮಾನ್ಯ ಕೃಷಿ ಸಚಿವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ರಾಜ್ಯದ ಎಲ್ಲಾ ಕೃಷಿ ಮತ್ತು ತೋಟಗಾರಿಕೆ ವಿಶ್ವವಿದ್ಯಾಲಯಗಳಿಗೆ ಸದರಿ ಯೋಜನೆಯನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸುವ ಹಿನ್ನೆಲೆಯಲ್ಲಿ ಕೆಲವು ಪ್ರತ್ಯೇಕ ಜವಾಬ್ದಾರಿ/ಕಾರ್ಯಗಳನ್ನು ವಹಿಸಲಾಗಿತ್ತು. ಅದರಂತೆ ಸಂಬಂಧಪಟ್ಟ ವಿಶ್ವವಿದ್ಯಾಲಯಗಳು ಕೈಗೊಂಡಿರುವ ಕ್ರಮಗಳ ಬಗ್ಗೆ ಈ ಕೆಳಕಂಡ ಮಾಹಿತಿಯನ್ನು ಸಭೆಯ ಗಮನಕ್ಕೆ ತರಲಾಯಿತು.

1. **ರೈತರಲ್ಲಿ ಅರಿವು ಮೂಡಿಸುವ ತರಬೇತಿ ಕಾರ್ಯಕ್ರಮಗಳ ವ್ಯಾಸಂಗ ಪಠ್ಯಕ್ರಮ ಕುರಿತು ಕೃಷಿ ವಿಶ್ವವಿದ್ಯಾಲಯ, ಧಾರವಾಡ;** ಇವರು ಕೈಗೊಂಡಿರುವ ಕ್ರಮದ ಬಗ್ಗೆ ಸಭೆಯಲ್ಲಿ ವಿವರವಾದ ವರದಿಯನ್ನು (ಪಿಪಿಟಿ) ಸಲ್ಲಿಸಿರುತ್ತಾರೆ. ಇಸ್ರೇಲ್ ಮಾದರಿ ಕೃಷಿ ಪದ್ಧತಿಯನ್ನು ಅಳವಡಿಸಿಕೊಳ್ಳಲು ರೈತರುಗಳಿಗೆ ತರಬೇತಿಯನ್ನು ನೀಡುವ ಬಗ್ಗೆ 03 ದಿನಗಳ, 05 ದಿನಗಳ ಮತ್ತು 07 ದಿನಗಳ ವಿಷಯ ಸೂಚಿಯನ್ನು ತಯಾರಿಸಲಾಗಿದೆ ಎಂದು ಸಭೆಗೆ ತಿಳಿಸಿದರು.

   ಸದರಿ ಅಂಶದ ಬಗ್ಗೆ ಚರ್ಚಿಸುತ್ತಾ, 07 ದಿನಗಳ ಅವಧಿಯು ಅಧಿಕವಾಗಿದ್ದು, ಸದರಿ ತರಬೇತಿಯನ್ನು 03 ಅಥವಾ 05 ದಿನಗಳ ಅವಧಿಗೆ ನಿಗದಿಪಡಿಸಿ, ಕಡಿಮೆ ಅವಧಿಯಲ್ಲಿ ರೈತರಿಗೆ ಅನುಕೂಲವಾಗುವಂತಹ ಪರಿಣಾಮಕಾರಿಯಾದ ತರಬೇತಿಯನ್ನು ನೀಡುವುದರಿಂದ ರೈತರ ಸಮಯದ ಅಭಾವದ ತೊಂದರೆಯನ್ನು ತಡೆಗಟ್ಟಬಹುದು. ಆದ್ದರಿಂದ ತರಬೇತಿ ಕಾರ್ಯವನ್ನು 03 ಅಥವಾ 05 ದಿನಗಳ ಅವಧಿಗೆ ನಿಗದಿಪಡಿಸುವಂತೆ ಕೃಷಿ ಇಲಾಖೆ ಕಾರ್ಯದರ್ಶಿ ಅವರು ಸೂಚಿಸಿದರು.

   ಕೃಷಿ ವಿಶ್ವವಿದ್ಯಾಲಯ, ಧಾರವಾಡ ಇವರ ವರದಿಯನ್ನು ಪರಿಶೀಲಿಸಿ, ಅವರಿಗೆ ವಹಿಸಲಾಗಿದ್ದ ಜವಾಬ್ದಾರಿಯಲ್ಲಿ ಶೇಕಡ 75ರಷ್ಟು ಕಾರ್ಯ ಸಾಧನೆಯಾಗಿದೆ. ಓದುವ ಪಠ್ಯ ಸಮಗ್ರಿ ಮತ್ತು ತರಬೇತಿಗಾಗಿ ಪ್ರತ್ಯೇಕ್ಷೆ ವಿಷಯ, ತರಬೇತಿಗಾಗಿ ರೈತರನ್ನು ಆಯ್ಕೆ ಮಾಡುವ ವಿಧಾನ, ರೈತರ ನೋಂದಣೆ ನಮೂನೆಗಳು ಮತ್ತು ದತ್ತಾಂಶ ಕ್ರೋಢಿಕರಣ ಮತ್ತು ಕ್ಷೇತ್ರ ಭೇಟಿ ನೀಡುವ ಪ್ರದೇಶಗಳ ವಿವರಗಳನ್ನು ಪೂರ್ಣಗೊಳಿಸುವಂತೆ ಮಿಷನ್ ನಿರ್ದೇಶಕರು ತಿಳಿಸಿದರು.

2. **ಪ್ರಾತ್ಯಕ್ಷಿಕೆ ತಾಕುಗಳ ವಿನ್ಯಾಸ ಹಾಗೂ ಅವುಗಳ ವಿವಿಧ ಘಟಕಗಳು ಕುರಿತು ಕೃಷಿ ವಿಶ್ವವಿದ್ಯಾಲಯ, ಬೆಂಗಳೂರು;** ಯೋಜನೆಗೆ ಪೂರಕವಾದ ಅಂಶಗಳ ಬಗ್ಗೆ ಕೈಗೊಂಡಿರುವ ಕ್ರಮಗಳಾದ ಪ್ರಾತ್ಯಕ್ಷಿಕೆ ವಿನ್ಯಾಸ, ವಿವಿಧ ತಳಿಗಳು ಮತ್ತು ಘಟಕಗಳು, ರೈತರ ವೀಕ್ಷಣೆ ಹಾಗೂ ತರಬೇತಿ ಕುರಿತಾದ ವಿವರಗಳನ್ನು ಸಭೆಯಲ್ಲಿ ಪಿಪಿಟಿ ಮೂಲಕ ಮಾಹಿತಿ ನೀಡಿದರು.

75

ವರದಿಯು ಉತ್ತಮವಾಗಿ ಮೂಡಿ ಬಂದಿರುವ ಬಗ್ಗೆ ಮಿಷನ್ ನಿರ್ದೇಶಕರು ತಿಳುಸುತ್ತಾ, ಮಾತನಾಡಿದ್ದ ಅವರು ಪ್ರಾತ್ಯಕ್ಷಿಕೆ ತಾಕುಗಳ ಮೂಲ ತತ್ವಗಳೊಂದಿಗೆ ಸ್ಥಾಪಿಸುವುದು, ಮೂರು ಗಾತ್ರದಲ್ಲಿ ಪ್ರಾತ್ಯಕ್ಷಿಕೆ ತಾಕುಗಳಲ್ಲಿ ವಿವಿಧ ವಿನ್ಯಾಸಗಳ ಮಾದರಿ ಸ್ತಾಪಿಸುವುದು ( 1,2 & 3 ಹೆಕ್ಟೇರ್), ಮೂರು ವಿವಿಧ ಮಾದರಿ ಪ್ರಾತ್ಯಕ್ಷಿಕೆ ತಾಕುಗಳನ್ನು ಸ್ಥಪಿಸಲು ಅಗತ್ಯವಿರುವ ಹಣಕಾಸಿನ ಅವಶ್ಯಕತೆ, ಪ್ರಾತ್ಯಕ್ಷಿಕೆ ತಾಕುಗಳ ಕಾರ್ಯಾಚರಣೆ ಕಾರ್ಯವಿಧಾನಗಳ ಪಟ್ಟಿ, ಪ್ರಾತ್ಯಕ್ಷಿಕೆ ತಾಕುಗಳ ಕಾರ್ಯಚರಣೆ ಮತ್ತು ನಿರ್ವಹಣೆ, ರೈತರ ಭೂಮಿಯಲ್ಲಿ ಪ್ರಾತ್ಯಕ್ಷಿಕೆ ತಾಕುಗಳ ಸ್ಥಾಪನೆ ಮತ್ತು ನಿರ್ವಹಣೆಯ ಯೋಜನೆ ರೂಪಿಸಲು ಅವರು ಸೂಚಿಸಿದರು.

3. **(ಬಿ.ಎಸ್ಸಿ) ಕೃಷಿ / ತೋಟಗಾರಿಕೆ ಪದವೀದರರಿಗೆ ಒಂದು ವರ್ಷದ ಅಧ್ಯಯನ ಕಾರ್ಯಕ್ರಮ ರೂಪಿಸುವ ಬಗ್ಗೆ ಕೃಷಿ ಹಾಗೂ ತೋಟಗಾರಿಕೆ ವಿಶ್ವವಿದ್ಯಾಲಯ, ಶಿವಮೊಗ್ಗ;** ಇವರು ಕೈಗೊಂಡಿರುವ ಕ್ರಮಗಳ ಬಗ್ಗೆ ಸಭೆಯಲ್ಲಿ ವಿವರವಾದ ವರದಿಯನ್ನು (ಪಿಪಿಟಿ) ಸಲ್ಲಿಸಿದರು.

   ಇದೇ ವೇಳೆ ಮಿಷನ್ ನಿರ್ದೇಶಕರು ಮೆಚ್ಚುಗೆಯನ್ನು ವ್ಯಕ್ತಪಡಿಸುತ್ತಾ, ಜಿಲ್ಲಾವಾರು ತರಬೇತಿ ನೀಡಲು ಅಗತ್ಯವಿರುವ ತರಬೇತುದಾರರ ರಚನೆ, ವಿದ್ಯಾರ್ಥಿಗಳ ಆಯ್ಕೆಗೆ ಅನುಸರಿಸಬೇಕಾದ ಅರ್ಹತಾ ಮಾನದಂಡಗಳು ಮತ್ತು ವೀಧಾನ, ಪದವಿಗೆ ಹಣಕಾಸಿನ ಅವಶ್ಯಕತೆ ಹಾಗೂ ವಿದ್ಯಾರ್ಥಿಗಳು ಅಳವಡಿಸಿಕೊಳ್ಳಬೇಕಾದ ಸೂಚಕಗಳ ಬಗ್ಗೆ ಬೇಕಾದ ಮಾಹಿತಿಯನ್ನು ಶೀಘ್ರವಾಗಿ ಸಂಗ್ರಹಿಸಲು ಕ್ರಮವಹಿಸುವಚಿತೆ ಅವರು ತಿಳಿಸಿದರು.

4. **ರೈತರಲ್ಲಿ ಅರಿವು ಮೂಡಿಸಬೇಕಾದ ವಿಷಯಗಳು ಹಾಗೂ ಅವುಗಳ ಬಗ್ಗೆ ಪರಿಣಾಮಕಾರಿ ಪ್ರಚಾರಾಂದೋಳನ ಕೈಗೊಳ್ಳುವ ಬಗ್ಗೆ–ಕೃಷಿ ವಿಶ್ವವಿದ್ಯಾಲಯ, ರಾಯಚೂರು;** ಇವರು ಕೈಗೊಂಡಿರುವ ಕ್ರಮಗಳಾ ವೈಜ್ಞಾನಿಕ ಕೃಷಿ ಪದ್ಧತಿಗಳು, ನೀರಿನ ಬಳಿಕೆ ಮತ್ತು ರಸಾವರಿಗಳ ಬಳಿಕೆ, ವಿವಿಧ ಬೆಳೆಗಳ ಮಾಹಿತಿ ಸೇರಿದಂತೆ ಇತರೆ ವಿಷಯಗಳ ಬಗ್ಗೆ ಸಭೆಯಲ್ಲಿ ವಿವರವಾದ ವರದಿಯನ್ನು (ಪಿಪಿಟಿ) ಸಲ್ಲಿಸಿದರು.

   ಸದರಿ ವರದಿಯನ್ನು ಗಮನಿಸಿದ ಮಿಷನ್ ನಿರ್ದೇಶಕರು ರೈತರುಗಳಿಗೆ ಪರಿಣಾಮಕಾರಿಯಾಗಿ ಮನದಟ್ಟಾಗುವ ರೀತಿಯಲ್ಲಿ ಸರಳವಾದ ಸ್ಥಳೀಯ ಭಾಷೆಯಲ್ಲಿ ಹೆಚ್ಚಿನ ವಿವರಗಳನ್ನೊಳಗೊಂಡಂತೆ ಮುದ್ರಿತ ಕೈಪಿಡಿ, ವೀಡಿಯೋ ಮತ್ತು ಧ್ವನಿಸುರಳಿಗೆ ಬೇಕಾದ ವಿಷಯಗಳನ್ನು, ವಿನೂತನ ಮತ್ತು ಅಕರ್ಷಕ ಚಿತ್ರಗಳ ಹಾಗೂ ವಿಷಯ ಸಿದ್ದಪಡಿಸುವುದು, ಅಭಿಯಾನದ ತಂತ್ರಗಾರಿಕೆ ಮತ್ತು ಸಾಮಾಜಿಕ ಮಾಧ್ಯಮ ತಂತ್ರಗಾರಿಕೆಗೆ ಬೇಕಾದ ವಿಷಯಗಲ ಬಗ್ಗೆ ಮಾಹಿತಿ ಸಿದ್ದಪಡಿಸುವಂತೆ ಅವರು ತಿಳಿಸಿದರು.

5. **ಸುಧಾರಿತ ಕೃಷಿ / ತೋಟಗಾರಿಕಾ ಪದ್ಧತಿಗಳ ಬಗ್ಗೆ ಕೈಪಿಡಿ – ತೋಟಗಾರಿಕಾ ವಿಶ್ವವಿದ್ಯಾಲಯ, ಬಾಗಲಕೋಟೆ;** ಇವರು ಕೈಗೊಂಡಿರುವ ಕ್ರಮದ ಬಗ್ಗೆ ಸಭೆಯಲ್ಲಿ ವಿವರವಾದ ವರದಿಯನ್ನು (ಪಿಪಿಟಿ) ಸಲ್ಲಿಸುತ್ತಾ, 38 ಬೆಳೆಗಳಿಗೆ ಸಂಬಂಧಿಸಿದಂತೆ ಕೈಪಿಡಿಯನ್ನು ತಯಾರಿಸಿರುವುದಾಗಿ ತಿಳಿಸಿದರು.

   ರೈತರುಗಳ ಆಯಾ ಪ್ರದೇಶಕ್ಕೆ ಅನ್ನುಗುಣವಾಗಿ ಬೇರೆ ಬೇರೆ ಬೆಳೆಗಳಿಗೆ ಇಸ್ರೇಲ್ ಮಾದರಿ ಕೃಷಿ ಪದ್ಧತಿಯನ್ನು ಸರಳವಾಗಿ ಅಳವಡಿಸಿಕೊಳ್ಳಲು ಅನುಕೂಲವಾಗುವಂತೆ ಸಮಯಾಧಾರಿತ ಕೃಷಿ ಕ್ರಮಗಳನ್ನು ಸಂಶೋಧನೆಯನ್ನಾಧರಿಸಿದ ಪೂರ್ಣ ವಿವರಗಳನ್ನೊಳಗೊಂಡ ಬೆಳೆವಾರು ಪ್ರತ್ಯೇಕ ಕೈಪಿಡಿಗಳನ್ನು ತಯಾರಿಸುವಂತೆ ಮಿಷನ್ ನಿರ್ದೇಶಕರು ಸೂಚಿಸಿದರು.

ಕೃಷಿ ಹಾಗೂ ತೋಟಗಾರಿಕೆ ಇಲಾಖೆಗಳು ಪಾಲುದಾರರ ಸಾಮರ್ಥ್ಯ ವೃದ್ಧಿ ಹಾಗೂ ಅವರಲ್ಲಿ ಅರಿವು ಮೂಡಿಸುವ ಕಾರ್ಯದಲ್ಲಿ ಪ್ರಮುಖ ಪಾತ್ರ ವಹಿಸಬೇಕಾದ ಅಗತ್ಯವನ್ನು ಮಿಷನ್ ನಿರ್ದೇಶಕರು ಈ ಸಂದರ್ಭದಲ್ಲಿ ಹೇಳಿದರು. ಈ ಕಾರ್‍ಯವನ್ನು ಯಶಸ್ವಿಯಾಗಿ ಜಾರಿಗೆ ತರಲು ಈ ಕೆಳಗಿನ ಕಾರ್ಯಕ್ರಮವನ್ನು ಜಾರಿಗೆ ತರುವ ಬಗ್ಗೆ ಸಭೆಯಲ್ಲಿ ಪ್ರಸ್ತಾಪಿಸಲಾಯಿತು.

ಯೋಜನೆಯನ್ನು ಜಾರಿಗೊಳಿಸಲು ಉದ್ದೇಶಿರುವ 9 ಜಿಲ್ಲೆಗಳಲ್ಲಿ ವಿಶೇಷ ಕೋಶಗಳನ್ನು ರಚಿಸಲಾಗುವುದು. ಸಂಬಂಧಪಟ್ಟ ಜಿಲ್ಲೆಗಳ ಕೃಷಿ ಇಲಾಖೆಯ ಜಂಟಿ ನಿರ್ದೇಶಕರು ಹಾಗೂ ತೋಟಗಾರಿಕಾ ಇಲಾಖೆ ಉಪ ನಿರ್ದೇಶಕರು ಈ ವಿಶೇಷ ಕೋಶಗಳ ನೋಡಲ್ ಅಧಿಕಾರಿಯಾಗಿ ಕಾರ್ಯ ನಿರ್ವಹಿಸುವರು. ಈ ವಿಶೇಷ ಕೋಶವು ಜಿಲ್ಲಾ ಮಟ್ಟದಲ್ಲಿ ವಹಿಸಲಾಗಿರುವ ಕಾರ್ಯಗಳನ್ನು ಅನುಷ್ಠಾನಗೊಳಿಸುವ ಜವಾಬ್ದಾರಿಯನ್ನು ಹೊಂದಿರುತ್ತದೆ. ಈ ಜವಾಬ್ದಾರಿಯನ್ನು ನಿರ್ವಹಿಸಲು ನೋಡಲ್ ಅಧಿಕಾರಿಗೆ ಅಗತ್ಯವಿರುವ ಮೂಲಸೌಕರ್ಯ ಹಾಗೂ ಸಿಬ್ಬಂದಿಯನ್ನು ಒದಗಿಸಲಾಗುವುದು.

ಅದೇ ರೀತಿ, ಯೋಜನೆ ಜಾರಿಗೊಳಿಸುವ ಜಿಲ್ಲೆಗಳಲ್ಲಿ ಪ್ರತಿ ರೈತ ಸಂಪರ್ಕ ಕೇಂದ್ರಕ್ಕೆ ಒಬ್ಬ ಕೃಷಿ ಅಧಿಕಾರಿ / ಸಹಾಯಕ ಸಹಾಯಕ ಅಧಿಕಾರಿಯನ್ನು ನೇಮಿಸಲಿದ್ದು, ಇವರುಗಳು ಕ್ಷೇತ್ರಮಟ್ಟದ ಅಧಿಕಾರಿಗಳಾಗಿ ಸಹ ಕಾರ್ಯನಿರ್ವಹಿಸಲಿರುತ್ತಾರೆ. ಈ ಕ್ಷೇತ್ರಾಧಿಕಾರಿಗಳಿಗೆ ಮಿಷನ್ ಆದೇಶದ ಬಗ್ಗೆ ತಿಳುವಳಿಕೆ ನೀಡಲಾಗುವುದು ಹಾಗೂ ಮಿಷನ್ ಕಾರ್ಯಸೂಚಿಯನ್ನು ಜಾರಿಗೊಳಿಸಲು ಅಗತ್ಯ ತರಬೇತಿಯನ್ನು ನೀಡಲಾಗುವುದು.

ಈ ನೋಡಲ್ ಅಧಿಕಾರಿಯು ಜಿಲ್ಲಾ ಮಟ್ಟದಲ್ಲಿ ಸೂಕ್ತ ರೈತರನ್ನು ಗುರುತಿಸಿ ಅಪೇಕ್ಷಿತ ಫಲಿತಾಂಶವನ್ನು ಸಾಧಿಸಲು ಅವರಿಗೆ ಸೂಕ್ತ ತರಬೇತಿಯನ್ನು ನೀಡಬೇಕಾಗುವುದು. ಈ ಕಾರ್ಯಗಳನ್ನು ಮಾಡಲು ನೋಡಲ್ ಅಧಿಕಾರಿಗೆ ಮಿಷನ್ ಹಾಗೂ ಕೃಷಿ / ತೋಟಗಾರಿಕಾ ವಿಶ್ವವಿದ್ಯಾಲಯಗಳು ಅಗತ್ಯ ನೆರವನ್ನು ನೀಡುತ್ತವೆ. ಇಲಾಖೆಗಳ ಹಾಗೂ ಆಯ್ದ ಕೃಷಿಕರ ಜಮೀನಿನಲ್ಲಿ ಪ್ರಾತ್ಯಕ್ಷಿಕೆ ತಾಕುಗಳನ್ನು ವಿನ್ಯಾಸಗೊಳಿಸಲಾಗುವುದು. ನೋಡಲ್ ಅಧಿಕಾರಿಗಳು ಅಂತಹ ಪ್ರಾತ್ಯಕ್ಷಿಕೆ ತಾಕುಗಳನ್ನು ಸಜ್ಜುಗೊಳಿಸಲು ಹಾಗೂ ನಿರ್ವಹಿಸಲು ಸೂಕ್ತ ಸ್ಥಳಗಳನ್ನು ಅಗತ್ಯ ಕ್ರಮಗಳನ್ನು ಕೈಗೊಳ್ಳತಕ್ಕದ್ದು.

ಕರ್ನಾಟಕದಲ್ಲಿ ಇಸ್ರೇಲ್ ತಂತ್ರಜ್ಞಾನ ಆಧಾರಿತ ಕೃಷಿ ಪದ್ಧತಿಗಳ ಬಗ್ಗೆ ನೋಡಲ್ ಅಧಿಕಾರಿಗಳು ರೈತರಿಗ ತಿಳುವಳಿಕೆ ನೀಡಲು ಪ್ರಚಾರಾಂದೋಳನ ಸಭೆಗಳನ್ನು ಗ್ರಾಮಮಟ್ಟದಲ್ಲಿ ಸಂಘಟಿಸಬೇಕು. ಸಾಧಿಸಬೇಕಾದ ಗುರಿ ಹಾಗೂ ಕಾರ್ಯವ್ಯಾಪ್ತಿಯನ್ನು ಮಿಷನ್ ವಿನ್ಯಾಸಗೊಳಿಸುತ್ತದೆ ಹಾಗೂ ಅಗತ್ಯ ಮಾರ್ಗದರ್ಶನವನ್ನು ಸಹ ನೀಡುತ್ತದೆ.

ನೋಡಲ್ ಅಧಿಕಾರಿಗಳು ಹಾಗೂ ಕ್ಷೇತ್ರಾಧಿಕಾರಿಗಳ ಪಾತ್ರ ಹಾಗೂ ಜವಾಬ್ದಾರಿಯನ್ನು ಮಿಷನ್ ನಿರ್ಧರಿಸುತ್ತದೆ ಹಾಗೂ ಕಾಲಕಾಲಕ್ಕೆ ಪ್ರಗತಿ ಪರಿಶೀಲನೆ ನಡೆಸುತ್ತದೆ. ಈ ಕಾರ್ಯಗಳನ್ನು ಕೃಷಿ ಮತ್ತು ತೋಟಗಾರಿಕೆಯ ಇರಡು ಉಪವಿಭಾಗಗಳು ನಿರ್ವಹಿಸಬೇಕಾಗುತ್ತದೆ. ಕೃಷಿ ಇಲಾಖೆ ಹಾಗೂ ತೋಟಗಾರಿಕೆ ಇಲಾಖೆಯ ಹೆಚ್ಚುವರಿ ಮಿಷನ್ ನಿರ್ದೇಶಕರು ಆಯಾ ಉಪವಿಭಾಗಗಳ ನೇತೃತ್ವ ವಹಿಸುವರು. ಪ್ರಸ್ತುತ ನಿರ್ದೇಶಕರು, ಕೃಷಿ ಇಲಾಖೆ ಹಾಗೂ ನಿರ್ದೇಶಕರು, ತೋಟಗಾರಿಕಾ ಇಲಾಖೆ ರವರುಗಳನ್ನು ಪದನಿಮಿತ್ತ ಹೆಚ್ಚುವರಿ ಮಿಷನ್ ನಿರ್ದೇಶಕರನ್ನಾಗಿ ನೇಮಿಸಲಾಗಿರುತ್ತದೆ ಎಂದು ಮಿಷನ್ ನಿರ್ದೇಶಕರು ಹೇಳಿದರು.

ಕೃಷಿ ಇಲಾಖೆಯ ಕಾರ್ಯದರ್ಶಿ ಅವರು ಸಭೆಯಲ್ಲಿ ಇದುವರೆವಿಗೆ ಕೃಷಿ / ತೋಟಗಾರಿಕೆ ವಿಶ್ವವಿದ್ಯಾನಿಲಯಗಳು ನೀಡಿದ ಕರಡು ವರದಿಗಳನ್ನು ವಿಸ್ತೃತವಾಗಿ ಗಮನಿಸಿದ್ದು ಆದಾಗ್ಯೂ ಮತ್ತಷ್ಟು ಅಗತ್ಯ ಅಂಶಗಳನ್ನು ಕ್ರೋಢಿಕರಿಸಿ, ವರದಿಗಳಲ್ಲಿನ ಅಂಶಗಳಲ್ಲಿನ ಸಾಧಕ-ಭಾದಕಗಳ ಕುರಿತು ಸುದೀರ್ಘವಾಗಿ ಚರ್ಚಿಸಿ ಅಂತಿಮ ವರದಿಗಳನ್ನು ಸಿದ್ದಪಡಿಸಲು ಮೇಲ್ಕಂಡ ಉಪ ಸಮಿತಿಗಳನ್ನು

ರಚಿಸಲಾಯಿತು. ಸದರಿ ಉಪ ಸಮಿತಿಗಳಲ್ಲಿ ಅವರವರಿಗೆ ವಹಿಸಲಾಗಿರುವ ಜವಾಬ್ದಾರಿಗಳನ್ನು ಕಾಲಮಿತಿಯೊಳಗೆ ಪೂರ್ಣಗೊಳಿಸಲು ಸೂಚಿಸುತ್ತಾ, ಉಪ ಸಮಿತಿಗಳು ಸಿದ್ದಪಡಿಸುವ ಅಂತಿಮ ವರದಿಗಳನ್ನು ಶಿಫಾರಸ್ಸುಗಳೊಂದಿಗೆ 15.07.2019 ರೊಳಗೆ ಕಡ್ಡಾಯವಾಗಿ ಸಲ್ಲಿಸುವಂತೆ ಅವರು ಸೂಚಿಸಿದರು.

ಸದರಿ ವಿಷಯಕ್ಕೆ ಸಂಬಂಧಿಸಿದಂತೆ ಈ ಕೆಳಕಂಡಂತೆ ಉಪ ಸಮಿತಿಗಳನ್ನು ರಚಿಸಲು ನಿರ್ಧರಿಸಲಾಯಿತು.

**SUB COMMITTEES FORMED FOR THE IMPLEMENTATION OF THE ISREAL BASED FARMING TECHNOLOGY:**

| | |
|---|---|
| 1. | **GOOD AGRICULTURE PRACTICE/MANUAL** |
| | Vice Chancellor, University of Agriculture Science, G.K.V.K. Bangalore. |
| | Vice Chancellor, University of Horticulture Science, Bagalkot. |
| | Sri Dundi, Additional Director, Horticulture Department. |
| | Joint Director, Agriculture Department, Kolar. |
| 2. | COURSE CURICULLUM |
| | Vice Chancellor, University of Agriculture Science, Dharwad. |
| | Vice Chancellor, University of Agriculture and Horticulture Science, Shimoga. |
| | Joint Director, Agriculture Department, Gadag. |
| | Deputy Director, Horticulture, Yadgir. |
| 3. | DEMO PLOTS |
| | Vice Chancellor, University of Agriculture Science, G.K.V.K. Bangalore. |
| | Vice Chancellor, University of Agriculture and Horticulture Science, Shimoga. |
| | Joint Director, Agriculture Department, Chitradurga. |
| | Deputy Director, Horticulture Department, Karwar. |
| 4. | ONE YEAR PROGRAMME |
| | Vice Chancellor, University of Agriculture Science, G.K.V.K. Bangalore. |
| | Vice Chancellor, University of Agriculture Science, Dharwad. |
| | Vice Chancellor, University of Agriculture and Horticulture Science, Shimoga. |
| | Vice Chancellor, University of Horticulture Science, Bagalkot. |
| 5. | CONTENT CREATION |
| | Vice Chancellor, University of Agriculture Science, Raichur. |
| | Vice Chancellor, University of Agriculture and Horticulture Science, Shimoga. |
| | Managing Director, Karnataka Antharaganga Micro Irrigation Corporation, Bangalore. |
| | Deputy Director, Horticulture, Tumkur |

ಸರ್ಕಾರದ ಆದೇಶ ಸಂಖ್ಯೆ:ಕೃಇ 01 ಕೃಕೈಲು 2019 ದಿನಾಂಕ:27-02-2019ರಲ್ಲಿ ಸೂಚಿಸಿರುವಂತೆ ಇಸ್ರೇಲ್ ಮಾದರಿ ಕೃಷಿ ಪದ್ಧತಿಯನ್ನು ಜಾರಿಗೊಳಿಸಲು ಕೃಷಿ ಇಲಾಖೆ, ತೋಟಗಾರಿಕೆ ಇಲಾಖೆ ಮತ್ತು ಜಲಸಂಪನ್ಮೂಲ ಇಲಾಖೆಯ ಅಧೀನದಲ್ಲಿ ಪ್ರತ್ಯೇಕ ತಾಂತ್ರಿಕ ಕೋಶಗಳನ್ನು ರಚಿಸಲು ಸೂಕ್ತ ಕ್ರಮ ಕೈಗೊಳ್ಳುವಂತೆಯೂ ಸಹ ತಿಳಿಸಿ, ವಂದನಾರ್ಪಣೆಯೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

(ರಾಜೇಂದರ್ ಕುಮಾರ್ ಕಟಾರಿಯಾ)
ಸರ್ಕಾರದ ಕಾರ್ಯದರ್ಶಿ,
ಕೃಷಿ ಇಲಾಖೆ.

ಸಭೆಯಲ್ಲಿ ಉಪಸ್ಥಿತರಿದ್ದ ಅಧಿಕಾರಿಗಳು.

1. ಶ್ರೀ ರಾಜೇಂದರ್ ಕುಮಾರ್ ಕಟಾರಿಯ ಭಾ.ಆ.ಸೇ., ಸರ್ಕಾರದ ಕಾರ್ಯದರ್ಶಿ, ಕೃಷಿ ಇಲಾಖೆ.
2. ಶ್ರೀ ಮನೋಜ್ ರಾಜ್ ಐ.ಎಫ್.ಎಸ್., ಮಿಷನ್ ನಿರ್ದೇಶಕರು, ಮಿಷನ್ ನಿರ್ದೇಶನಾಲಯ, ಕೃಷಿ ಇಲಾಖೆ.
3. ಡಾ. ರಾಜೇಂದ್ರ ಪ್ರಸಾದ್, ಕುಲಪತಿಗಳು, ಕೃಷಿ ವಿಶ್ವವಿದ್ಯಾಲಯ, ಬೆಂಗಳೂರು.
4. ಡಾ: ಎಂ.ವಿ.ವೆಂಕಟೇಶ್, ನಿರ್ದೇಶಕರು, ತೋಟಗಾರಿಕೆ ಇಲಾಖೆ, ಲಾಲ್‌ಬಾಗ್ ಬೆಂಗಳೂರು.
5. ಶ್ರೀಮತಿ ನಂದಿನಿ ಕುಮಾರಿ, ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ಅಂತರಗಂಗಾ ಸೂಕ್ಷ್ಮ ನೀರಾವರಿ ನಿಗಮ ನಿಯಮಿತ, ಬೆಂಗಳೂರು.
6. ಶ್ರೀ ಬಿ.ನಾಗಭೂಷಣ್, ಸರ್ಕಾರದ ಉಪಕಾರ್ಯದರ್ಶಿ–1, ಕೃಷಿ ಇಲಾಖೆ.
7. ಶ್ರೀಮತಿ ಬಿ.ಎಸ್.ನಾಗರತ್ನಮ್ಮ,ಸರ್ಕಾರದ ಅಧೀನ ಕಾರ್ಯದರ್ಶಿ, ಯೋಜನಾ ಶಾಖೆ, ಕೃಷಿ ಇಲಾಖೆ.
8. ಡಾ. ಹನುಮಂತಪ್ಪ ಡಿ.ಸಿ., ಹಿರಿಯ ವಿಜ್ಞಾನಿ(ಬೇಸಾಯಶಾಸ್ತ್ರ), ಕೃಷಿ ವಿಶ್ವವಿದ್ಯಾಲಯ, ಬೆಂಗಳೂರು.
9. ಡಾ. ಮೂಡಲಗಿರಿಯಪ್ಪ, ಮುಖ್ಯ ವಿಜ್ಞಾನಿ, ಖುಷ್ಕಿ ಸಂಶೋಧನಾ ಬೇಸಾಯ ಪ್ರಾಯೋಜನೆ, ಜಿ.ಕೆ.ವಿ.ಕೆ., ಬೆಂಗಳೂರು.
10. ಡಾ. ತಿಮ್ಮೇಗೌಡ ಎಂ.ಎನ್., ಹಿರಿಯ ವಿಜ್ಞಾನಿ, ಜಿ.ಕೆ.ವಿ.ಕೆ., ಕೃಷಿ ವಿಶ್ವವಿದ್ಯಾಲಯ, ಬೆಂಗಳೂರು.
11. ಶ್ರೀ ರಮೇಶ ತುರಮರಿ, ತೋ.ತ.ಸ., ಶಿರಸಿ.
12. ಶ್ರೀ ಕೆ.ಬಿ.ದುಂಡಿ, ತೋಟಗಾರಿಕೆ ಅಪರ ನಿರ್ದೇಶಕರು, ಲಾಲ್‌ಬಾಗ್, ಬೆಂಗಳೂರು.
13. ಶ್ರೀ ಲಕ್ಷ್ಮಣ್ ಎಸ್.ಕೆ., ಜಂಟಿ ಕೃಷಿ ನಿರ್ದೇಶಕರು, ಚಿತ್ರದುರ್ಗ ಜಿಲ್ಲೆ, ಚಿತ್ರದುರ್ಗ.
14. ಶ್ರೀ ಸಿ.ಬಿ.ಬಾಲರೆಡ್ಡಿ, ಜಂಟಿ ಕೃಷಿ ನಿರ್ದೇಶಕರು, ಗದಗ.
15. ಡಾ. ಹೆಚ್.ಕೆ. ಶಿವಕುಮಾರ್, ಜಂಟಿ ಕೃಷಿ ನಿರ್ದೇಶಕರು, ಕೋಲಾರ.
16. ಶ್ರೀಮತಿ ಶಭನಾ ಎಂ. ಶಕೀಲ್, ಜಂಟಿ ನಿರ್ದೇಶಕರು, ಕೃಷಿ ಇಲಾಖೆ, ಕೊಪ್ಪಳ.
17. ಶ್ರೀ ರಘು ಬಿ., ತೋಟಗಾರಿಕೆ ಉಪ ನಿರ್ದೇಶಕರು, ತುಮಕೂರು ಜಿಲ್ಲೆ, ತುಮಕೂರು.
18. ಶ್ರೀ ಎಸ್.ಪಿ.ಭೋಗಿ, ತೋಟಗಾರಿಕೆ ಉಪ ನಿರ್ದೇಶಕರು, ಹಾವೇರಿ ಜಿಲ್ಲೆ, ಹಾವೇರಿ.
19. ಡಾ. ಎನ್.ಬಸವರಾಜ್, ಸಂಶೋಧನಾ ನಿರ್ದೇಶಕರು, ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ಬಾಗಲಕೋಟೆ.
20. ಸಂಶೋಧನಾ ನಿರ್ದೇಶಕರು, ಕೃಷಿ ವಿಶ್ವವಿದ್ಯಾಲಯ, ಬೆಂಗಳೂರು.
21. ಸಹ ಸಂಶೋಧನಾ ನಿರ್ದೇಶಕರು, ವಿ.ಸಿ.ಫಾರಂ, ಮಂಡ್ಯ.
22. ಡಾ. ಸಿ.ರಾಮಚಂದ್ರ, ಪ್ರಾಧ್ಯಾಪಕರು(ಬೇಸಾಯಶಾಸ್ತ್ರ), ವಿ.ಸಿ. ಫಾರಂ, ಮಂಡ್ಯ.
23. ಡಾ. ಎಂ.ವಿ.ಮಂಜುನಾಥ್, ಪ್ರಾಧ್ಯಾಪಕರು(ಕೃಷಿ ತಾಂತ್ರಿಕ), ಕೃಷಿ ವಿಶ್ವವಿದ್ಯಾಲಯ, ಧಾರವಾಡ.
24. ಶ್ರೀ ಕೆ.ಸಿ.ಶಶಿಧರ, ಪ್ರಾಧ್ಯಾಪಕರು ಮತ್ತು ಮುಖ್ಯಸ್ಥರು, ಕೃಷಿ ಇಂಜಿನಿಯರಿಂಗ್, ಕೃಷಿ ತೋಟಗಾರಿಕೆ ವಿಶ್ವವಿದ್ಯಾಲಯ, ಶಿವಮೊಗ್ಗ.
25. ಡಾ. ಆಯ್.ಬಿ.ಬಿರಾದರ, ಪ್ರಾಧ್ಯಾಪಕರು(ಬೇಸಾಯಶಾಸ್ತ್ರ), ಕುಲಪತಿಗಳ ಕಾರ್ಯಾಲಯ, ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ಬಾಗಲಕೋಟೆ.
26. ಶ್ರೀ. ಕೆ.ಟಿ. ರಾಜಣ್ಣ, ವಿಷಯ ತಜ್ಞರು, ತೋಟಗಾರಿಕೆ, ಸುಜಲ–III, ಲಾಲ್‌ಬಾಗ್
27. ಶ್ರೀ ಜಿ.ಎನ್.ವೆಂಕಟರಾಮರಾವ್, ಸಮಾಲೋಚಕರು, ತೋಟಗಾರಿಕೆ ಇಲಾಖೆ.
28. ಶ್ರೀ ಇಂ. ರಾಜಕುಮಾರ್ ಹಳಿ ದೊಡ್ಡಿ, ಸಹಾಯಕ ಪ್ರಾಧ್ಯಾಪಕರು, ಸಂಶೋಧನಾ ನಿರ್ದೇಶನಾಲಯ, ಕೃಷಿ ವಿಶ್ವವಿದ್ಯಾಲಯ, ರಾಯಚೂರು.
29. ಶ್ರೀ ಅಶೋಕ್ ಆರ್.ಕೆ., ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು, ಹಾವೇರಿ.
30. ಶ್ರೀ ಬಸವರಾಜ್ ಎನ್. ಬರಿಗಾರ್, ಹಿರಿಯ ಸಹಾಯಕರು, ತೋಟಗಾರಿಕೆ ನಿರ್ದೇಶನಾಲಯ, ಹಾವೇರಿ.
31. ಶ್ರೀ ದತ್ತಾತ್ರೇಯ ಪಾಟೀಲ್, ಎನ್.ಹೆಚ್.ಎಂ., ಯಾದಗಿರಿ.

71

<u>ಪ್ರತಿ ಮಾಹಿತಿಗಾಗಿ:</u>

1. ಸರ್ಕಾರದ ಕಾರ್ಯದರ್ಶಿ, ಕೃಷಿ ಇಲಾಖೆ ಇವರ ಆಪ್ತ ಕಾರ್ಯದರ್ಶಿ.
2. ಮಿಷನ್ ನಿರ್ದೇಶಕರು ಹಾಗೂ ಸರ್ಕಾರದ ವಿಶೇಷ ಕಾರ್ಯದರ್ಶಿ (ಆಹಾರ ಸಂಸ್ಕರಣೆ ಮತ್ತು ಬೆಳೆ ಕಟಾವು ತಂತ್ರಜ್ಞಾನ) ಕೃಷಿ ಇಲಾಖೆ ಇವರ ಆಪ್ತ ಸಹಾಯಕರು.
3. ಸರ್ಕಾರದ ಉಪಕಾರ್ಯದರ್ಶಿ–1, ಕೃಷಿ ಇಲಾಖೆ ಇವರ ಆಪ್ತ ಸಹಾಯಕರು.
4. ಸರ್ಕಾರದ ಉಪಕಾರ್ಯದರ್ಶಿ, ತೋಟಗಾರಿಕೆ ಇಲಾಖೆ ಇವರ ಆಪ್ತ ಸಹಾಯಕರು.